# ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

## ಲಿಂಗತ್ವ ಸಮಾನತೆ ಪ್ರೋತ್ಸಾಹ


| | | | ಶೀರ್ಷಿಕೆ | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–4 |
| 1 – 3 | ಅರಿವು | : | ನಾವಿಬ್ಬರೂ ಇವುಗಳನ್ನು ಮಾಡಬಹುದೇ ? | 5 |
| 1 – 3 | ಅನುಭವ | : | ಮನೆಯಲ್ಲಿ ನನ್ನ ಕುಟುಂಬ | 6 |
| 1 – 3 | ಅವಲೋಕನ | : | ಚಿತ್ರ ಬಿಡಿಸೋಣ ! | 7 |
| 4 – 5 | ಅರಿವು | : | ಮೀನಾ ಮತ್ತು ಮಿಟ್ಟೂ ಅವರನ್ನು ಭೇಟಿ ಮಾಡಿ | 8 |
| 4 – 5 | ಅನುಭವ | : | ಚಿತ್ರಗಳ ಬಗ್ಗೆ ಮಾತನಾಡೋಣ | 9–10 |
| 4 – 5 | ಅವಲೋಕನ | : | ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ | 11 |
| 6 – 8 | ಅರಿವು | : | ಲಿಂಗ ಎಂದರೆ ಏನು ಎಂದು ತಿಳಿದಿದೆಯೇ? | 12 |
| 6 – 8 | ಅನುಭವ | : | ಈ ಕಥೆಯನ್ನು ಹೇಗೆ ಮುಂದುವರೆಸಬಹುದು? | 13–14 |
| 6 – 8 | ಅವಲೋಕನ | : | ಒಪ್ಪುತ್ತೇನೆ ಅಥವಾ ಒಪ್ಪುವುದಿಲ್ಲ? | 15 |
| | ಪ್ರತಿಜ್ಞೆ | | | 16 |
| | ಸಲಹಾತ್ಮಕ ಚಟುವಟಿಕೆಗಳು | | | 16 |

## ಪೀಠಿಕೆ :

ಲಿಂಗಬೇಧವಿಲ್ಲದೆ ಎಲ್ಲರನ್ನೂ ಗೌರವ ಮತ್ತು ಘನತೆಯಿಂದ ಕಾಣುವುದು ಮುಖ್ಯವಾದ ಹಾಗೂ ಅಗತ್ಯವಾದ ಸಾಮಾಜಿಕ ಮೌಲ್ಯವಾಗಿದೆ. ಇದನ್ನು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಬೆಳೆಸುವುದು ಅವಶ್ಯಕವಾಗಿದೆ. ದಿನನಿತ್ಯದ ಜೀವನದಲ್ಲಿ ಕಾಣುವ ಲಿಂಗ ಆಧಾರಿತ ಪಕ್ಷಪಾತಗಳು, ರೂಢಿಗಳು ಮತ್ತು ತಾರತಮ್ಯಗಳ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲು ಈ ಮಾಡ್ಯೂಲ್ ಸಹಾಯ ಮಾಡುತ್ತದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡು ಅಂತಹ ತಾರತಮ್ಯಗಳಿಗೆ ಶರಣಾಗುವ ಬದಲು, ಅವುಗಳನ್ನು ಗುರುತಿಸಿ ಸಾಮಾಜಿಕ ನಿರ್ಬಂಧಗಳನ್ನು ಎದುರಿಸಲು ಶಕ್ತರಾಗುವಂತೆ ಮಾಡುವುದು ಈ ಮಾಡ್ಯೂಲ್ ನ ಮುಖ್ಯ ಉದ್ದೇಶವಾಗಿದೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯೂಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮಾಡ್ಯೂಲ್ ಅನ್ನು ಕೆಳಕಂಡಂತೆ ಮೂರು ಘಟಕಗಳಾಗಿ ವಿಂಗಡಿಸಲಾಗಿದೆ.

1) ಅರಿವು

2) ಅನುಭವ

3) ಅವಲೋಕನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್ ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಸಂರಚಿಸಲಾಗಿದೆ. ಇದರಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಓರ್ವ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷಿಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂದು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಸ್ವಲ್ಪವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸದಾಯಕ ವಾತಾವರಣವಿರುವುದನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಸಂಭ್ರಮ ಶನಿವಾರ (ಬ್ಯಾಗ್ ರಹಿತ ದಿನದ) ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

## ಲಿಂಗತ್ವ ಸಮಾನತೆಯನ್ನು ಖಾತ್ರಿಪಡಿಸುವುದು



**ಶ್ರುತಿ :** ಹಾಯ್ ಮದನ್! ನೀನು ಶಾಲೆಯ ಕಿರಿಯ ಕ್ರಿಕೆಟ್ ತಂಡದ ಸದಸ್ಯನಲ್ಲವೇ ?

**ಮದನ್ :** ಹಾಯ್ ಶ್ರುತಿ! ಹೌದು

**ಶ್ರುತಿ :** ನಾನು ಕೂಡ ನಿಮ್ಮ ತಂಡಕ್ಕೆ ಸೇರಲು ಬಯಸುತ್ತೇನೆ. ನಾನು ತುಂಬಾ ಚೆನ್ನಾಗಿ ಕ್ರಿಕೆಟ್ ಆಡುತ್ತೇನೆ. ನಾನು ಪ್ರತಿದಿನ ನನ್ನ ಸ್ನೇಹಿತರೊಂದಿಗೆ ಆಡುತ್ತೇನೆ.

**ಮದನ್ :** ತುಂಬಾ ಒಳ್ಳೆಯದು ಶ್ರುತಿ! ಆದರೆ ನಮ್ಮ ತಂಡ ಹುಡುಗರಿಗೆ ಮಾತ್ರ. ಕ್ಷಮಿಸು, ನೀನು ಅದರ ಸದಸ್ಯಳಾಗಲು ಸಾಧ್ಯವಿಲ್ಲ.

ಹಾಯ್ ಮಕ್ಕಳೇ! ಮದನ್ ಶ್ರುತಿಗೆ ಹೇಳಿದ್ದನ್ನು ನೀವು ಕೇಳಿದಿರಾ? ಶ್ರುತಿ ಕ್ರಿಕೆಟ್ ತಂಡದ ಸದಸ್ಯಳಾಗಲು ಏಕೆ ಸಾಧ್ಯವಿಲ್ಲ?

ಸಾಮಾನ್ಯವಾಗಿ ಕ್ರಿಕೆಟ್, ಫುಟ್ಬಾಲ್ ನಂತಹ ಆಟಗಳನ್ನು ದೈಹಿಕವಾಗಿ ಸದೃಢವಾಗಿರುವ ಹುಡುಗರು ಆಡಲು, ಹೆಚ್ಚು ಅರ್ಹರು ಎಂಬ ನಂಬಿಕೆ ಇದೆ. ನಮ್ಮ ಮನೆಗಳಲ್ಲಿ ಸಾಮಾನ್ಯವಾಗಿ ತಂದೆಯಂದಿರ ಬದಲು ನಮ್ಮ ತಾಯಂದಿರು ಅಡುಗೆ ಮಾಡುವುದು ಮತ್ತು ಮನೆಯನ್ನು ಸ್ವಚ್ಛ ಮಾಡುವುದನ್ನು ನೋಡುತ್ತೇವೆ. ಅಂತಹ ವ್ಯತ್ಯಾಸಗಳು ಇರಬೇಕೆ? ಇದು ನಮ್ಮ ಹುಟ್ಟಿನಿಂದ ಬಂದಿದೆಯೇ?

**ಹುಡುಗರು ಮತ್ತು ಹುಡುಗಿಯರು ಇಬ್ಬರೂ ಏನು ಮಾಡಬಹುದು ಎಂದು ನೋಡೋಣ !**



- ಹುಡುಗಿಯರು ಮತ್ತು ಹುಡುಗರು ಇಬ್ಬರೂ ಕ್ರಿಕೆಟ್ ಅಥವಾ ಫುಟ್‌ಬಾಲ್‌ನಂತಹ ಯಾವುದೇ ಕ್ರೀಡೆಗಳನ್ನು ಆಡಬಹುದು.
- ಹುಡುಗಿಯರು ಮತ್ತು ಹುಡುಗರು ಇಬ್ಬರೂ ಟ್ರಕ್ ಮತ್ತು ಗೊಂಬೆಗಳೊಂದಿಗೆ ಆಡಬಹುದು
- ಹುಡುಗಿಯರು ಮತ್ತು ಹುಡುಗರು ಅಡುಗೆ ಮಾಡುವುದು, ಸ್ವಚ್ಛಗೊಳಿಸುವುದು, ಬಟ್ಟೆ ಒಗೆಯುವುದು ಮುಂತಾದ ಮನೆಯ ಕೆಲಸಗಳನ್ನು ಮಾಡಬಹುದು.
- ಹುಡುಗರು ಮತ್ತು ಹುಡುಗಿಯರು ಹಿರಿಯರು ಹೇಳುವ ಮಾತುಗಳನ್ನು ಪಾಲಿಸಬಹುದು.
- ಹುಡುಗರು ಮತ್ತು ಹುಡುಗಿಯರು ಮಕ್ಕಳ ರಕ್ಷಣೆ, ಹಕ್ಕುಗಳು ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳಬಹುದು.



ಈ ಮಾಡ್ಯೂಲ್ ಮೂಲಕ ಲಿಂಗತ್ವ ಅಸಮಾನತೆಯ ಆಳವಾದ ಪರಿಕಲ್ಪನೆಯನ್ನು ಅರಿವು (ತಿಳುವಳಿಕೆ), ಅನುಭವ, ಅವಲೋಕನದ (ಪ್ರತಿಬಿಂಬಿಸುವಿಕೆ) ಮೂಲಕ ವಿಷಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡೋಣ.

ಈ ಮಾಡ್ಯೂಲ್‌ನಲ್ಲಿ 3 ವಿಭಾಗಗಳಿದ್ದು ಪ್ರತಿ ವಿಭಾಗಕ್ಕೆ 60 ನಿಮಿಷಗಳನ್ನು ಮೀಸಲಿಡಲಾಗಿದೆ. ಮಾಡ್ಯುಲ್ ನಲ್ಲಿ ಸೂಚಿಸಲಾಗಿರುವ ಚಟುವಟಿಕೆಗಳನ್ನು ನಡೆಸಲು ಶಿಕ್ಷಕರೊಂದಿಗೆ ಒಬ್ಬರು ಅಥವಾ ಇಬ್ಬರು ಹಿರಿಯ ವಿದ್ಯಾರ್ಥಿಗಳನ್ನು ನಿರೂಪಕರು / ನಾಯಕರನ್ನಾಗಿ ಮಾಡುವುದು.

**ಮಾಡ್ಯೂಲ್‌ನ ಚಟುವಟಿಕೆಗಳನ್ನು ಮಾಡಿದ ನಂತರ ;**

- ಲಿಂಗದ ಪಾತ್ರಗಳು ಮತ್ತು ಅದರ ಪ್ರಸ್ತುತತೆಯನ್ನು ವಿಶ್ಲೇಷಿಸಲು ಸಮರ್ಥಳಾ/ನಾಗುತ್ತೇನೆ.
- ಲಿಂಗದ ರೂಢಿಗಳನ್ನು ಪ್ರಶ್ನಿಸಲು ಸಮರ್ಥಳಾ/ನಾಗುತ್ತೇನೆ.
- ಲಿಂಗ ಸಮಾನತೆಯ ಮಹತ್ವವನ್ನು ವಿವರಿಸಲು ಸಮರ್ಥಳಾ/ನಾಗುತ್ತೇನೆ.

ಮೊದಲನೆಯದಾಗಿ ಲಿಂಗತ್ವ ಸಮಾನತೆಯ ಕುರಿತು ಅರಿವು ಮೂಡಿಸಿಕೊಳ್ಳೋಣ.

ಅರಿವು :

## ತರಗತಿ 1–3 : ನಾವಿಬ್ಬರೂ ಇವುಗಳನ್ನು ಮಾಡಬಹುದೇ? (60 ನಿಮಿಷಗಳು)

ಗಿಡಗಳಿಗೆ ನೀರು ಹಾಕುವುದು

ಬಟ್ಟೆ ಒಗೆಯಲು ಅಮ್ಮನಿಗೆ ಸಹಾಯ ಮಾಡುವುದು



ರಂಗೋಲಿ ಹಾಕುವುದು

ಸ್ನೇಹಿತರೊಂದಿಗೆ ಕುಸ್ತಿ ಆಡುವುದು

ಹಸುವಿಗೆ ಹುಲ್ಲು ಹಾಕುವುದು

ಕುರಿಗಳನ್ನು ಮೇಯಿಸುವುದು

ಶಾಲೆಯ ಗುಂಪು ನೃತ್ಯದಲ್ಲಿ ಭಾಗವಹಿಸುವುದು

ಅಂಗಡಿಯಿಂದ ಬ್ರೆಡ್ ತರುವುದು ಮತ್ತು ಉಳಿದ ಹಣವನ್ನು ಎಣಿಸುವುದು

ತೋಟದಲ್ಲಿ ಕೆಲಸ ಮಾಡುವುದು

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮಕ್ಕಳನ್ನು ಶಾಲೆಯ ಸನ್ನಿವೇಶಕ್ಕೆ ಅನುಗುಣವಾಗಿ 5–6 ಗುಂಪುಗಳಾಗಿ ಮಾಡಿ ಮೇಲೆ ತೋರಿಸಲಾಗಿರುವ ಎಲ್ಲಾ ಫ್ಲಾಶ್‌ಕಾರ್ಡಗಳನ್ನು ಒಬ್ಬೊಬ್ಬರಿಗೆ ಕೊಟ್ಟು ಈ ಕೆಲಸಗಳನ್ನು ಹುಡುಗರು ಮತ್ತು ಹುಡುಗಿಯರು ಇಬ್ಬರೂ ಮಾಡಬಹುದೇ ಎಂದು ಕೇಳಬೇಕು.
- ಅವರು ಕೊಟ್ಟ ಉತ್ತರಗಳಿಗೆ ಕಾರಣಗಳನ್ನು ನೀಡುವಂತೆ ಪ್ರೋತ್ಸಾಹಿಸುವುದು.
- ಯಾವ ಕೆಲಸಗಳನ್ನು ಹುಡುಗರು ಮಾತ್ರ ಅಥವಾ ಹುಡುಗಿಯರು ಮಾತ್ರ ಮಾಡುವರು ಎಂದು ಪ್ರತಿಗುಂಪಿಗೆ ಚರ್ಚಿಸಲು 15–20 ನಿಮಿಷ ನೀಡಬೇಕು. ಎಲ್ಲಾ ಕೆಲಸಗಳನ್ನು ಇಬ್ಬರೂ ಮಾಡಬಹುದು ಎಂದು ವಿವರಿಸುವ ಮೂಲಕ ಚರ್ಚೆಯನ್ನು ಸಾರಾಂಶೀಕರಿಸಬೇಕು.

ಅನುಭವ :

ತರಗತಿ 1–3 :

# ಮನೆಯಲ್ಲಿ ನನ್ನ ಕುಟುಂಬ

(30 ನಿಮಿಷಗಳು)



ಅಜ್ಜ ಮನೆಯಲ್ಲಿ ಏನು ಮಾಡುತ್ತಾರೆ?

ಅಮ್ಮ ಮನೆಯಲ್ಲಿ ಏನು ಮಾಡುತ್ತಾರೆ?

ಅಜ್ಜಿ ಮನೆಯಲ್ಲಿ ಏನು ಮಾಡುತ್ತಾರೆ?

ಅಪ್ಪ ಮನೆಯಲ್ಲಿ ಏನು ಮಾಡುತ್ತಾರೆ?

ನೀನು ಮನೆಯಲ್ಲಿ ಏನು ಮಾಡುವೆ?

ಅಣ್ಣ ಮನೆಯಲ್ಲಿ ಏನು ಮಾಡುತ್ತಾರೆ?

ಅಕ್ಕ ಮನೆಯಲ್ಲಿ ಏನು ಮಾಡುತ್ತಾರೆ?

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮೇಲಿನ ಫ್ಲಾಶ್‌ಕಾರ್ಡ್‌ಗಳನ್ನು ಮಕ್ಕಳಿಗೆ ತೋರಿಸಿ ಪ್ರತಿಯೊಬ್ಬರೂ ಯಾವುದೇ ಮೂರು ಫ್ಲ್ಯಾಷ್‌ಕಾರ್ಡ್‌ಗಳ ಕುರಿತು ಚಿತ್ರ ಬಿಡಿಸಲು ಹೇಳುವುದು.
- ಮಕ್ಕಳು ಡ್ರಾಯಿಂಗ್ ಮುಗಿಸಿದ ನಂತರ, ತಾಯಂದಿರು ಅಡುಗೆ ಮಾಡುವ ಅಥವಾ ಸಹೋದರರು ಫುಟ್ಬಾಲ್ ಆಡುವ, ಅಜ್ಜಿ ಬುಟ್ಟಿ ಹೆಣೆಯುವ ಪುನರಾವರ್ತಿತ ಚಿತ್ರಗಳನ್ನು ನಿರೂಪಕರು / ನಾಯಕರು ಗುರುತು ಮಾಡುವುದು.
- ಸಣ್ಣ ಗುಂಪುಗಳಲ್ಲಿ ಅಥವಾ ಒಂದು ದೊಡ್ಡ ಗುಂಪಿನಲ್ಲಿ (ಮಕ್ಕಳ ಸಂಖ್ಯೆಯನ್ನು ಅವಲಂಬಿಸಿ) ಕೆಲವು ಉದ್ಯೋಗಗಳನ್ನು ಒಂದು ಲಿಂಗಕ್ಕೆ ಸೇರಿದವರು ಮಾತ್ರ ಮಾಡುತ್ತಾರೆ ಎಂಬುದರ ಕುರಿತು ಚರ್ಚೆಯನ್ನು ನಿರೂಪಕನು ಅನುಕೂಲಿಸುತ್ತಾ ಎಲ್ಲಾ ಉದ್ಯೋಗಗಳನ್ನು ಪ್ರತಿಯೊಬ್ಬರೂ ಮಾಡಬಹುದು ಎಂಬ ಅಂಶದ ಕಡೆಗೆ ಚರ್ಚೆಯನ್ನು ನಿರ್ದೇಶಿಸುವುದು.
- ಇನ್ನೂ ಉಳಿದ 30 ನಿಮಿಷಗಳು 6–8 ಮಕ್ಕಳು ನಿರ್ವಹಿಸುವ ಮಕ್ಕಳ ಪಾತ್ರಾಭಿನಯವನ್ನು ವೀಕ್ಷಿಸುವರು.

**ಅವಲೋಕನ :**

**ತರಗತಿ 1–3 :** **(60 ನಿಮಿಷಗಳು)**

# ಚಿತ್ರ ಬಿಡಿಸೋಣ !

ನಾವೆಲ್ಲಾ ಸಮಾನರು !

ಬಾಲಕಿಯರ ಶಕ್ತಿ !!

ತಾರತಮ್ಯವನ್ನು ನಿಲ್ಲಿಸಿ !

ಒಗ್ಗಟ್ಟಿನಲ್ಲಿ ಶಕ್ತಿ ಇದೆ !

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ.
- ಪ್ರತಿ ಗುಂಪಿಗೂ ಚಾರ್ಟ್ ಪೇಪರ್, ಪೆನ್ಸಿಲ್, ರಬ್ಬರ್ ಮುಂತಾದವುಗಳನ್ನು ಒದಗಿಸಬೇಕು
- ಇಲ್ಲಿಯವರೆಗೂ ಲಿಂಗ ವಿಷಯದಲ್ಲಿ ಮಾಡಿದ ಚಟುವಟಿಕೆಗಳ ಕಲಿಕೆಯ ಆಧಾರದ ಮೇಲೆ ಮೇಲಿನ ಯಾವುದೇ ವಿಷಯದ ಕುರಿತು ಚಿತ್ರ ಬಿಡಿಸಲು/ಪೋಸ್ಟರ್ ತಯಾರಿಸಲು ಸೂಚಿಸುವುದು
- ನಿರೂಪಕರು/ನಾಯಕರು ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಾ ಅವರನ್ನು ಈ ಚಟುವಟಿಕೆಯಲ್ಲಿ ತೊಡಗಿಸುವುದು.

ಅರಿವು :

## ತರಗತಿ 4–5 : ಮೀನಾ ಮತ್ತು ಮಿಟ್ಟೂ ಅವರನ್ನು ಭೇಟಿ ಮಾಡಿ (60 ನಿಮಿಷಗಳು)



- ▲ ಯಾರು ವೇಗವಾಗಿ ಓಡಬಹುದು ಎಂದು ನೀವು ಭಾವಿಸುತ್ತೀರಿ?
- ▲ ಯಾರು ಉತ್ತಮ ಶ್ರೇಣಿಗಳನ್ನು ಪಡೆಯುತ್ತಾರೆ ಎಂದು ನೀವು ಭಾವಿಸುತ್ತೀರಿ?
- ▲ ಯಾರು ಕ್ರೀಡೆಯಲ್ಲಿ ಉತ್ತಮ ಎಂದು ನೀವು ಭಾವಿಸುತ್ತೀರಿ?
- ▲ ಯಾರು ಉತ್ತಮವಾಗಿ ನೃತ್ಯ ಮಾಡಬಹುದು ಎಂದು ನೀವು ಭಾವಿಸುತ್ತೀರಿ?
- ▲ ಯಾರು ಕೆಟ್ಟವರು ಎಂದು ನೀವು ಭಾವಿಸುತ್ತೀರಿ?
- ▲ ಯಾರು ಬಲಶಾಲಿ ಎಂದು ನೀವು ಭಾವಿಸುತ್ತೀರಿ?
- ▲ ಯಾರು ಹೆಚ್ಚಾಗಿ ಅಳುತ್ತಾರೆಂದು ನೀವು ಭಾವಿಸುತ್ತೀರಿ?
- ▲ ಯಾರು ಹೆಚ್ಚು ಸುಂದರ ಎಂದು ನೀವು ಭಾವಿಸುತ್ತೀರಿ?
- ▲ ಯಾರು ಹೆಚ್ಚು ಗೊಂಬೆಗಳನ್ನು ಹೊಂದಿದ್ದಾರೆಂದು ನೀವು ಭಾವಿಸುತ್ತೀರಿ?

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ▲ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ. ಯಾವುದಾದರೂ ಕಥೆ ಹೇಳುವ ಮೂಲಕ ಮೀನಾ ಮತ್ತು ಮಿಟ್ಟೂ ಅವರ ಚಿತ್ರಗಳನ್ನು ತೋರಿಸಿ ಅವರನ್ನು ಪರಿಚಯಿಸಿ.
- ● ಪ್ರತಿಯೊಂದು ಗುಂಪಿಗೆ ಒಂದು ಪ್ರಶ್ನೆಯಂತೆ ಮೇಲೆ ಪಟ್ಟಿ ಮಾಡಲಾದ ಪ್ರಶ್ನೆಗಳ ಕಾರ್ಡನ್ನು ನೀಡಿ. ಕೊಟ್ಟಿರುವ ಪ್ರಶ್ನೆಯ ಕುರಿತು ಚರ್ಚಿಸಲು ಪ್ರತಿ ಗುಂಪಿಗೂ 20 ನಿಮಿಷ ಕಾಲ ಅವಕಾಶ ನೀಡಿ.
- ● ನಂತರದ 20 ನಿಮಿಷಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಪ್ರತಿ ಗುಂಪಿಗೂ ತಿಳಿಸುವುದು. ಉತ್ತರಗಳಿಗೆ ಕಾರಣಗಳನ್ನು ಹೇಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.
  - ▲ ಲಿಂಗ ಆಧಾರಿತ ರೂಢಿಗಳನ್ನು ಪುನರುಚ್ಚರಿಸುವಂತಹ ಪ್ರತಿಕ್ರಿಯೆಗಳನ್ನು ನಿರೂಪಕ/ನಾಯಕ ಬರೆದಿಟ್ಟುಕೊಳ್ಳಬೇಕು.
  - ▲ ಹುಡುಗರು ಏನು ಮಾಡಬಹುದು ಮತ್ತು ಹುಡುಗಿಯರು ಏನು ಮಾಡಬಹುದು ಎಂಬುದರ ಬಗ್ಗೆ ಅವರ ಅನಿಸಿಕೆಗಳನ್ನು ಹಂಚಿಕೊಳ್ಳಲು ಪ್ರತಿ ಗುಂಪಿಗೆ 15 ನಿಮಿಷ ನೀಡಿ. ವೈಯಕ್ತಿಕ ಪ್ರತಿಭೆ ಮತ್ತು ಭಾವನೆಗಳು ಲಿಂಗವನ್ನು ನಿರ್ಧರಿಸುವ ಅಂಶವಲ್ಲ ಎಂಬುದನ್ನು ಗುರುತಿಸುತ್ತಾ ಚರ್ಚೆಯನ್ನು ಸಾರಾಂಶೀಕರಿಸಿ.

ಅನುಭವ :

ತರಗತಿ 4–5 :

# ಚಿತ್ರಗಳ ಬಗ್ಗೆ ಮಾತನಾಡೋಣ

(30 ನಿಮಿಷಗಳು)



- ಈ ಚಿತ್ರದಲ್ಲಿ ಆಸಕ್ತಿದಾಯಕವಾದದ್ದು ಏನಾದರೂ ಇದೆಯೇ?
- ಇದನ್ನು ನಿಮ್ಮ ಮನೆಯಲ್ಲಿ ನೋಡಿರುವಿರಾ?
- ಮನೆಯನ್ನು ಯಾರು ಗುಡಿಸಬೇಕು ಎಂದು ನೀವು ಭಾವಿಸುತ್ತೀರಿ?
- ಪುರುಷರು ಮತ್ತು ಮಹಿಳೆಯರು ಇಬ್ಬರೂ ಗುಡಿಸಬಹುದೇ?



- ಹುಡುಗರು ಅಳುತ್ತಾರೆಯೇ?
- ಅವರು ಅಳುವುದು ಸರಿಯೇ?
- ಹುಡುಗ ಅಳುವುದನ್ನು ನೋಡಿದಾಗ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?



- ಹುಡುಗರು ಸಾಮಾನ್ಯವಾಗಿ ಯಾವ ಆಟಿಕೆಗಳೊಂದಿಗೆ ಆಡುತ್ತಾರೆ?
- ಹುಡುಗಿಯರು ಸಾಮಾನ್ಯವಾಗಿ ಯಾವ ಆಟಿಕೆಗಳೊಂದಿಗೆ ಆಡುತ್ತಾರೆ?
- ಹುಡುಗರು ಮತ್ತು ಹುಡುಗಿಯರು ಅವರು ಇಷ್ಟಪಡುವ ಯಾವುದೇ ಆಟಿಕೆಗಳೊಂದಿಗೆ ಆಟವಾಡಬಹುದು ಎಂದು ನೀವು ಭಾವಿಸುತ್ತೀರಾ?

- ನಿಮ್ಮ ಮನೆಯಲ್ಲಿ ಯಾರು ಕೆಲಸಕ್ಕೆ ಹೋಗುತ್ತಾರೆ ?
- ನಿಮ್ಮ ಕುಟುಂಬವನ್ನು ಯಾರು ನೋಡಿಕೊಳ್ಳುತ್ತಾರೆ ?
- ಮಹಿಳೆಯರು ಮತ್ತು ಪುರುಷರು ಇಬ್ಬರೂ ಕೆಲಸಕ್ಕೆ ಹೋಗಬಹುದೇ ಮತ್ತು ಕುಟುಂಬವನ್ನು ಇಬ್ಬರೂ ಒಟ್ಟಿಗೆ ನೋಡಿಕೊಳ್ಳ ಬಹುದೇ?
- ಮಹಿಳೆಯು ಕೆಲಸಕ್ಕೆ ಹೋಗಬಹುದೇ ಮತ್ತು ಪುರುಷನು ಮನೆಯನ್ನು ನೋಡಿಕೊಳ್ಳಬಹುದೇ?



**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ ಚಿತ್ರಗಳ ಕಾರ್ಡ್ ಗಳನ್ನು ತೋರಿಸಿ.
- ಅವರಿಂದ ಬರುವ ಪ್ರತಿಕ್ರಿಯೆಗಳನ್ನು ಬರೆದುಕೊಳ್ಳುವುದು. ನಂತರ ಮಾರ್ಗದರ್ಶಕ ಪ್ರಶ್ನೆಗಳಿಂದ ಚರ್ಚೆಯನ್ನು ಮುಂದುವರೆಸುವುದು. ನಂತರ ತಮ್ಮ ಸಮುದಾಯದಲ್ಲಿ ಮತ್ತು ಮನೆಯಲ್ಲಿನ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ಸಾಮಾನ್ಯವಾಗಿರುವ ಲಿಂಗ ರೂಢಿಗಳನ್ನು ತೊಡೆದುಹಾಕುವತ್ತ ಚರ್ಚೆಗಳು ಸಾಗಬೇಕು. ಲಿಂಗ ರೂಢಿಗಳ ಬಗ್ಗೆ ಪ್ರಶ್ನಿಸುವ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸಲು ಚರ್ಚೆಗಳು ಸಹಾಯ ಮಾಡಬೇಕು.
- ಎಲ್ಲಾ ತಂಡದವರು ಅನುಭವ ಹಂಚಿಕೆಯ ನಂತರ ಇನ್ನೂ ಉಳಿದ 30 ನಿಮಿಷಗಳು (6–8)ನೇ ತಂಡದ ಪಾತ್ರಾಭಿನಯವನ್ನು ವೀಕ್ಷಿಸುತ್ತಾರೆ.

ಅವಲೋಕನ :

ತರಗತಿ 4–5 : (60 ನಿಮಿಷಗಳು)

# ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ

4 ವರ್ಷದ ಸಲ್ಮಾ ಪೊಲೀಸ್ ಅಧಿಕಾರಿಯಾಗಲು ಬಯಸಿದ್ದಳು. ಅವಳ ಆಸೆ ಈಡೇರಿಸುವಲ್ಲಿ ಪೋಷಕರು ಅವಳನ್ನು ಬೆಂಬಲಿಸುತ್ತಾರೆ. ಹಾಗಿದ್ದರೂ ಸಹ ತನ್ನ ಹಳ್ಳಿಯಲ್ಲಿ ಒಂದು ಹುಡುಗಿಯೂ ಸಹ ಯಾವುದೇ ಕೆಲಸ ಅಥವಾ ಉದ್ಯೋಗವನ್ನು ಪಡೆದಿಲ್ಲ. ಆದ್ದರಿಂದ ಅವಳ ಭವಿಷ್ಯವು ಅನಿಶ್ಚಿತವಾಗಿದೆ

ದಿನೇಶ್ ಅಂಗಡಿಯಲ್ಲಿ ಕೆಲಸ ಮಾಡುತ್ತಿರುತ್ತಾನೆ. ಇತ್ತೀಚೆಗೆ ಅವನ ಮದುವೆ ನಿಶ್ಚಯವಾಯಿತು. ಹುಡುಗಿಯ ಕುಟುಂಬದಿಂದ ಯಾವುದೇ ವರದಕ್ಷಿಣೆ ತೆಗೆದುಕೊಳ್ಳದಿರುವ ಬಗ್ಗೆ ಅವನು ತುಂಬಾ ಸ್ಪಷ್ಟವಾಗಿ ಹೇಳಿರುತ್ತಾನೆ. ಆದಾಗ್ಯೂ ಅವನ ಹೆತ್ತವರಿಗೆ ಅವನ ಮಾತನ್ನು ಕೇಳಲು ಇಷ್ಟವಿರಲಿಲ್ಲ ಮತ್ತು ವರದಕ್ಷಿಣೆ ತೆಗೆದುಕೊಳ್ಳುವಂತೆ ಒತ್ತಾಯಿಸುತ್ತಾರೆ.

ರಿಷಬ್ 8 ನೇ ತರಗತಿಯಲ್ಲಿ ಓದುತ್ತಿದ್ದಾನೆ. ಅವನು ಯಾವಾಗಲೂ ತನ್ನ ತಾಯಿಯೊಂದಿಗೆ ರಂಗೋಲಿಯನ್ನು ಹಾಕುತ್ತಿದ್ದನು. ಅವನು ಅದರಲ್ಲಿ ತುಂಬಾ ಪರಿಣಿತನಾಗಿದ್ದನು. ಇತ್ತೀಚೆಗೆ ಪಕ್ಕದ ಶಾಲೆಯು ರಂಗೋಲಿ ಸ್ಪರ್ಧೆಯನ್ನು ಸಾರ್ವಜನಿಕರಿಗೆ ಆಯೋಜಿಸಿತ್ತು. ರಿಷಬ್ ಅದರಲ್ಲಿ ಭಾಗವಹಿಸಲು ಬಯಸುತ್ತಾನೆ. ಆದರೆ ಹುಡುಗರು ಅಂತಹ ಸ್ಪರ್ಧೆಗಳಲ್ಲಿ ಭಾಗವಹಿಸಬಾರದು ಎಂದು ಅವನ ಹಿರಿಯ ಸಹೋದರ ಅವನನ್ನು ಗದರಿಸುತ್ತಾನೆ.

ಕೈಫ್ ಮತ್ತು ಅವನ ಸಹೋದರಿ ತಮ್ಮ ಹೆತ್ತವರಿಗೆ ಮನೆಯ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಅವರಿಬ್ಬರೂ ಮನೆಯನ್ನು ಸ್ವಚ್ಛಗೊಳಿಸುವರು, ಅಡುಗೆ ಪಾತ್ರೆಗಳು ಮತ್ತು ಬಟ್ಟೆಗಳನ್ನು ತೊಳೆಯುವರು. ಕೈಫ್ ನ ಸ್ನೇಹಿತರಿಗೆ ಈ ವಿಷಯ ಗೊತ್ತಾಗಿ, ಅವರು ಅವನನ್ನು ಗೇಲಿ ಮಾಡಲು ಪ್ರಾರಂಭಿಸಿದರು ಮತ್ತು ಅವನನ್ನು ಹುಡುಗಿ ಎಂದು ಕರೆಯಲು ಪ್ರಾರಂಭಿಸಿದರು.

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ.


ಪ್ರತಿ ಗುಂಪಿಗೆ ಸ್ಟೋರಿ ಕಾರ್ಡ್ ಗಳಲ್ಲಿ ಒಂದನ್ನು ನೀಡಿ ಕೆಳಕಂಡ ಪ್ರಶ್ನೆಗಳ ಆಧಾರದ ಮೇಲೆ ಚರ್ಚೆಯನ್ನು ಪ್ರಾರಂಭಿಸಬೇಕು.

- ಕಥೆಯಲ್ಲಿ ಉಲ್ಲೇಖಿಸಲಾದ ವಿಷಯ ಯಾವುದು? ಇದು ಸರಿಯೇ?
- ಇದು ನಡೆಯುತ್ತಿದೆ ಎಂದು ನೀವು ಏಕೆ ಭಾವಿಸುತ್ತೀರಿ?
- ನೀವು ಎಂದಾದರೂ ಇದೇ ರೀತಿಯ ಅನುಭವವನ್ನು ಹೊಂದಿದ್ದೀರಾ ಅಥವಾ ಘಟನೆಯನ್ನು ನೋಡಿದ್ದೀರಾ?
- ಇಂತಹ ನಿರ್ದಿಷ್ಟ ಸನ್ನಿವೇಶದಲ್ಲಿ ಏನು ಮಾಡಬೇಕು ಎಂದು ನೀವು ಭಾವಿಸುತ್ತೀರಿ?
- ತಂಡಗಳು ಹೆಚ್ಚಿದ್ದಲ್ಲಿ ಇಂತಹ ಇನ್ನೂ ಇತರೆ ಸನ್ನಿವೇಶಗಳನ್ನು ನೀಡಬಹುದು.

ಅರಿವು :

ತರಗತಿ 6–8 : (60 ನಿಮಿಷಗಳು)

# ಲಿಂಗ ಎಂದರೆ ಏನು ಎಂದು ತಿಳಿದಿದೆಯೇ ?



**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ. ಪ್ರತಿ ಗುಂಪಿಗೆ ಒಂದೇ ರೀತಿಯ ಎರಡು ರೇಖಾ ಚಿತ್ರ ಇರುವ ಚಾರ್ಟ್ ಪೇಪರ್ ಗಳನ್ನು ಕೊಡಿ.
- ಒಂದು ರೇಖಾ ಚಿತ್ರವನ್ನು ಹುಡುಗಿಯಾಗಿ ಮತ್ತು ಇನ್ನೊಂದು ರೇಖಾ ಚಿತ್ರವನ್ನು ಹುಡುಗನಾಗಿ ಚಿತ್ರಿಸಲು ಸೂಚಿಸಿ.
- ಅವರ ರೇಖಾಚಿತ್ರಗಳ ಕೆಳಗೆ ಹುಡುಗ ಅಥವಾ ಹುಡುಗಿಯ ಬಗ್ಗೆ ಹೆಚ್ಚು ಮುಖ್ಯವೆಂದು ತೋರುವ ಗುಣಗಳು ಅಥವಾ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಲು ಹೇಳಿ (ಉದಾಹರಣೆಗೆ: ಬಾಲಕಿಯರಿಗೆ ಉದ್ದನೆಯ ಕೂದಲನ್ನು, ಹುಡುಗರು ಎತ್ತರವಾಗಿ ಮತ್ತು ಸದೃಢವಾಗಿರುತ್ತಾರೆ ಇತ್ಯಾದಿ ಹೀಗೆ ಪಟ್ಟಿ ಮಾಡಬಹುದು)
- ಪ್ರತಿ ಗುಂಪಿನವರು ತಮ್ಮ ರೇಖಾಚಿತ್ರಗಳನ್ನು ಮತ್ತು ಪಟ್ಟಿ ಮಾಡಿರುವ ಗುಣಗಳ ಪಟ್ಟಿಯನ್ನು ಪ್ರಸ್ತುತಪಡಿಸಲು ತಿಳಿಸಿ. ಎಲ್ಲಾ ಪ್ರಸ್ತುತಿಗಳು ಮುಗಿದ ನಂತರ, ಯಾವುದೇ 5 ಸಾಮಾನ್ಯ ಗುಣಗಳನ್ನು ನಿರೂಪಕರು/ ನಾಯಕರು ಗುರುತಿಸುವುದು ಮತ್ತು ಇದು ಹುಟ್ಟಿದಾಗಿನಿಂದ ಇತ್ತೇ ಅಥವಾ ಅದನ್ನು ಕಲಿತದ್ದೇ ಎಂದು ವಿದ್ಯಾರ್ಥಿಗಳನ್ನು ಕೇಳುವುದು.
- ಹುಟ್ಟಿನಿಂದ ಬಂದ ದೈಹಿಕ ವ್ಯತ್ಯಾಸಗಳು (ಉದಾ : ಸುಂದರವಾಗಿರುವುದು, ಕುಳ್ಳಗಿರುವುದು) ಮತ್ತು ಸಾಮಾಜಿಕ ರೂಢಿ ಮತ್ತು ಅಭ್ಯಾಸಗಳಿಂದ ಕಲಿತಿರುವುದು (ಹುಡುಗಿಯರು ಬಿಂದಿ ಇಡುವುದು, ಹುಡುಗರು ಸಣ್ಣ ಕೂದಲು ಹೊಂದಿರುವುದು) ಇಂತಹ ಸಾಮಾನ್ಯ ಗುಣ ಲಕ್ಷಣಗಳನ್ನು ಬೋರ್ಡ್ ಅಥವಾ ಚಾರ್ಟ್ ಬಳಸಿ ಪಟ್ಟಿ ಮಾಡುವುದು.
- ಇಬ್ಬರ ನಡುವೆ ಇರುವ ವ್ಯತ್ಯಾಸವನ್ನು ಕೇಳಿ. ಹುಡುಗರು ಮತ್ತು ಹುಡುಗಿಯರ ನಡುವಿನ ಕೆಲವು ವ್ಯತ್ಯಾಸಗಳು ಜೈವಿಕವಾಗಿ (ಉದಾ. ಭೌತಿಕ ಲಕ್ಷಣಗಳು) ಬರುವುದೆಂದು ಹಾಗೂ ಇತರ ಲಕ್ಷಣಗಳು ಹೆಚ್ಚಾಗಿ ಸಾಮಾಜಿಕ ರೂಢಿಗಳಿಂದ ಪಡೆಯುತ್ತಾರೆ ಎಂದು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.

ಅನುಭವ :

ತರಗತಿ 6–8 : (60 ನಿಮಿಷಗಳು)

# ಈ ಕಥೆಯನ್ನು ಹೇಗೆ ಮುಂದುವರೆಸಬಹುದು ?

ರಮೇಶ್ ಮತ್ತು ರಮ್ಯಾ ಅವರಿಗೆ ಕಾರ್ತಿಕ್ ಮತ್ತು ಕೀರ್ತನಾ ಎಂಬ ಇಬ್ಬರು ಮಕ್ಕಳಿದ್ದಾರೆ. ಅವರು ತಮ್ಮ ಮಕ್ಕಳನ್ನು ತುಂಬಾ ಪ್ರೀತಿಸುತ್ತಾರೆ. ಕೀರ್ತನಾ ಓದುವುದರಲ್ಲಿ ತುಂಬಾ ಚುರುಕಾಗಿದ್ದಾಳೆ ಮತ್ತು ಅವಳು ಮುಂದೆ ಪ್ರಾಧ್ಯಾಪಕಳಾಗಬೇಕೆಂಬ ಆಸೆ ಹೊಂದಿದ್ದಾಳೆ. ಕಾರ್ತಿಕ್‌ಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿ ಇಲ್ಲ. ಆದರೆ ಅವನು ಕ್ರೀಡೆಯಲ್ಲಿ ತುಂಬಾ ಚುರುಕಾಗಿದ್ದಾನೆ ಮತ್ತು ಭವಿಷ್ಯದಲ್ಲಿ ಪ್ರಸಿದ್ಧ ಕ್ರೀಡಾಪಟುವಾಗಬೇಕೆಂಬ ಆಸೆ ಹೊಂದಿದ್ದಾನೆ .

ನಾಲ್ಕು ಸದಸ್ಯರಿರುವ ಬಿಹಾರಿ ಕುಟುಂಬವು ಪೊನ್ನಾಪೇಟೆ ಕಾಫಿ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಒಂದು ಶೆಡ್ ನಲ್ಲಿ ಆಶ್ರಯ ಪಡೆದರು, ಪುರುಷ ವ್ಯಕ್ತಿಗೆ ರೂ. 3000 ಮತ್ತು ಅವನ ಪತ್ನಿಗೆ ಅದೇ ಕೆಲಸಕ್ಕೆ ರೂ. 1500 ಕೂಲಿ ನಿಗಧಿಯಾಯಿತು. ದಂಪತಿಗೆ ಇಬ್ಬರು ಮಕ್ಕಳಿದ್ದರು, ಅವರು ಹತ್ತಿರದ ಸರ್ಕಾರಿ ಶಾಲೆಗೆ ಹೋಗುತ್ತಾರೆ. ಒಂದು ದಿನ ಆ ಕುಟುಂಬದ ಪುರುಷ ಸದಸ್ಯ ತೀವ್ರ ಅನಾರೋಗ್ಯದಿಂದ ಮೃತಪಟ್ಟ. ಪತ್ನಿಯು ಕೇವಲ ರೂ. 1500 ಆದಾಯ ಹೊಂದಿರುವ ಆಕೆ 3 ಸದಸ್ಯರನ್ನು ನೋಡಿಕೊಳ್ಳಬೇಕು. ಅವರಿಗೆ ಸಂಪಾದಿಸಲು ಬೇರೆ ಮಾರ್ಗಗಳಿರಲಿಲ್ಲ.

ಜಯಪ್ಪ ಮತ್ತು ಶಂಕರಮ್ಮ ತಮ್ಮ ಮಗ ಮತ್ತು ಸೊಸೆಯ 5ನೇ ಮಗುವಿನ ನಿರೀಕ್ಷಣೆ ಯಲ್ಲಿದ್ದಾರೆ. ಅವರು ಈಗಾಗಲೇ 4 ಹೆಣ್ಣು ಮೊಮ್ಮಕ್ಕಳನ್ನು ಹೊಂದಿರುವ ಕಾರಣ ಈ ಬಾರಿ ಮೊಮ್ಮಗನನ್ನು ಹೊಂದಲು ಅವರು ಉತ್ಸುಕರಾಗಿದ್ದಾರೆ. ಒಬ್ಬ ಗಂಡು ಮಗ ಮಾತ್ರ ತಮ್ಮ ಕುಟುಂಬದ ಹೆಸರನ್ನು ಮುಂದೆ ಉಳಿಸುವುದು ಎಂದು ಅವರು ನಂಬಿದ್ದಾರೆ. ರಾಜೀವ್ ತನ್ನ ಹೆಂಡತಿ ಮತ್ತೊಂದು ಹೆಣ್ಣು ಮಗುವಿಗೆ ಜನ್ಮ ನೀಡಿದರೆ ಹೆತ್ತವರು ಅವನ ಮೇಲೆ ಕೋಪಗೊಳ್ಳುತ್ತಾರೆ ಎಂಬ ಭಯದಲ್ಲಿದ್ದಾನೆ.

ಶಿವ ಮತ್ತು ರಾಧಿಕಾ ಅವರಿಗೆ ಸಂತೋಷ್ ಮತ್ತು ಗೀತಾ ಎಂಬ ಇಬ್ಬರು ಮಕ್ಕಳಿದ್ದಾರೆ. ಶಿವನಿಗೆ ಸಾಂಪ್ರದಾಯಿಕ ಮನಸ್ಥಿತಿ ಇದೆ. ಅವರ ಸೀಮಿತ ಆದಾಯದಿಂದ, ಸಂತೋಷ್ ನನ್ನು ಹೆಸರಾಂತ ಖಾಸಗಿ ಶಾಲೆಗೆ ಮತ್ತು ಗೀತಾಳನ್ನು ಹತ್ತಿರದ ಸಾಧಾರಣ ಶಾಲೆಗೆ ಕಳುಹಿಸಲು ನಿರ್ಧರಿಸಿದರು. ಗೀತಾ ತುಂಬಾ ಚೆನ್ನಾಗಿ ಓದುತ್ತಿದ್ದಳು ಮತ್ತು ವಿಷಯಗಳನ್ನು ಬೇಗನೆ ಗ್ರಹಿಸುತ್ತಿದ್ದಳು. ಆದರೆ ಆಕೆಯ ಪೋಷಕರು ಅವಳನ್ನು ಉನ್ನತ ವ್ಯಾಸಂಗಕ್ಕೆ ಕಳುಹಿಸಲು ಆಸಕ್ತಿ ಹೊಂದಿರಲಿಲ್ಲ. ಮತ್ತೊಂದೆಡೆ ಸಂತೋಷ್ ಅಧ್ಯಯನದಲ್ಲಿ ಕಳಪೆ ಮಟ್ಟದಲ್ಲಿದ್ದನು. ಆದರೆ ಅವನ ಹೆತ್ತವರು ಎಷ್ಟೇ ಹಣ ಖರ್ಚು ಮಾಡಿಯಾದರೂ ವೈದ್ಯನಾಗಿ ಮಾಡ ಬೇಕೆಂದು ಬಯಸಿದ್ದರು.

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ಮೇಲಿನ ಯಾವುದಾದರು ಒಂದೊಂದು ಕಥೆಯನ್ನು ನೀಡಬೇಕು.
- ಮಕ್ಕಳು ತಮ್ಮ ತಮ್ಮಲ್ಲಿ ಚರ್ಚಿಸಿ, ಈ ಕಥೆಯನ್ನು ಹೇಗೆ ಮುಂದುವರೆಸಬಹುದೆಂದು ಮತ್ತು ಹೇಗೆ ಮುಕ್ತಾಯಗೊಳಿಸಬಹುದೆಂದು ಯೋಚಿಸಿ ಎಂದು ಸೂಚಿಸಬೇಕು.
- ಚರ್ಚೆ ಮತ್ತು ತಯಾರಿಗೆ 20 ನಿಮಿಷಗಳ ಕಾಲಾವಕಾಶ ನೀಡಬೇಕು, ಪ್ರತಿಗುಂಪು ಅವರು ತಯಾರಿಸಿರುವ ಕಥೆಯನ್ನು ಪಾತ್ರಾಭಿನಯ ಮಾಡಲು 3–4 ನಿಮಿಷ ಕಾಲಾವಕಾಶ ನೀಡಿ.
- ಪಾತ್ರಾಭಿನಯದ ನಂತರ, ಪ್ರತಿ ಪಾತ್ರಾಭಿನಯದಲ್ಲಿ ಪ್ರದರ್ಶಿಸಲಾದ ಲಿಂಗ ಸಮಾನತೆಯ ಅಥವಾ ಲಿಂಗ ಅಸಮಾನತೆಯ ಚಿತ್ರಣವನ್ನು ನಿರೂಪಕ/ ನಾಯಕನು ಪ್ರಧಾನವಾಗಿ ಒತ್ತಿ ಹೇಳಬೇಕು.
- 1–3 ಮತ್ತು 4–5 ನೇ ಹಂತದ ವಿದ್ಯಾರ್ಥಿಗಳ ಚಟುವಟಿಕೆಗಳು ಪೂರ್ಣಗೊಂಡಿದ್ದಲ್ಲಿ ಆ ಮಕ್ಕಳು ಸಹ ಪಾತ್ರಾಭಿನಯ ನೋಡಲು ಅವಕಾಶ ನೀಡುವುದು.

ಅವಲೋಕನ :

## ತರಗತಿ 6–8 : ಒಪ್ಪುತ್ತೇನೆ ಅಥವಾ ಒಪ್ಪುವುದಿಲ್ಲ ? (60 ನಿಮಿಷಗಳು)

| ಬಲವಾಗಿ ಒಪ್ಪುತ್ತೇನೆ | ಒಪ್ಪುತ್ತೇನೆ | ಒಪ್ಪುವುದಿಲ್ಲ | ಬಲವಾಗಿ ಒಪ್ಪುವುದಿಲ್ಲ |
|---|---|---|---|

- ತಾಯಂದಿರು ಅಡುಗೆ ಮಾಡಿ ಮನೆ ನೋಡಿಕೊಳ್ಳಬೇಕು ಮತ್ತು ತಂದೆ ಹೊರಗೆ ಹೋಗಿ ಸಂಪಾದಿಸಬೇಕು.
- ಹುಡುಗಿಯರು ಕ್ರಿಕೆಟ್‌ನಂತಹ ಆಟಗಳನ್ನು ಆಡಬಾರದು.
- ಹುಡುಗರು ಅಳಬಾರದು.
- ಬಾಲಕಿಯರಿಗಿಂತ ಬಾಲಕರು ಕ್ರೀಡೆಯಲ್ಲಿ ಉತ್ತಮರು
- ಹುಡುಗಿಯರು ಮತ್ತು ಹುಡುಗರು ಎಲ್ಲ ರೀತಿಯಲ್ಲಿ ಸಮಾನರು.
- ಪ್ರತಿಯೊಬ್ಬರೂ ತಮ್ಮ ಲಿಂಗವನ್ನು ಯೋಚಿಸದೆ ಅವರು ಒಳ್ಳೆಯದನ್ನು ಮಾಡಲು ಅಥವಾ ತಮ್ಮ ಆಸಕ್ತ ವಿಷಯವನ್ನು ಆಯ್ಕೆ ಮಾಡಲು ಪ್ರೋತ್ಸಾಹಿಸಬೇಕು.
- ಹುಡುಗರು ಉತ್ತಮ ನೃತ್ಯಗಾರರಾಗಬಹುದು.
- ಬಾಲಕರಿಗಿಂತ ಬಾಲಕಿಯರು ಉತ್ತಮ ಕ್ರೀಡಾಪಟುಗಳು.
- ತಾಯಿಯಂತೆ ತಂದೆಯೂ ಅಡುಗೆ ಮಾಡಬಹುದು, ಮನೆಯನ್ನು ಸ್ವಚ್ಛ ಗೊಳಿಸಬಹುದು ಮತ್ತು ಮಕ್ಕಳನ್ನು ನೋಡಿಕೊಳ್ಳಬಹುದು.

**ನಿರೂಪಕರು/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ತರಗತಿಯ ನೆಲದ ಮೇಲೆ ಬಲವಾಗಿ ಒಪ್ಪುತ್ತೇನೆ, ಒಪ್ಪುತ್ತೇನೆ ,ಒಪ್ಪುವುದಿಲ್ಲ, ಬಲವಾಗಿ ಒಪ್ಪುವುದಿಲ್ಲ ಎಂದು ನಾಲ್ಕು ಕಾಲಮ್ ಗಳಲ್ಲಿ ಬರೆಯಿರಿ.
- ಕೊಟ್ಟಿರುವ ಹೇಳಿಕೆಗಳನ್ನು ಒಂದೊಂದಾಗಿ ಓದಲು ಪ್ರಾರಂಭಿಸಿ ಮತ್ತು ಅವರ ಒಪ್ಪಿಗೆಯ ಅಥವಾ ಭಿನ್ನಾಭಿಪ್ರಾಯದ ಮಟ್ಟವನ್ನು ಅವಲಂಬಿಸಿ ಕಾಲಂ ನಲ್ಲಿ ನಿಲ್ಲುವಂತೆ ವಿದ್ಯಾರ್ಥಿಗಳಿಗೆ ಹೇಳಿ.
- ಮಕ್ಕಳು ನಿಂತ ನಂತರ, ತಮ್ಮ ಸ್ಥಾನದಲ್ಲಿ ನಿಲ್ಲಲು ಕಾರಣವನ್ನು ವಿವರಿಸಲು ಮತ್ತು ಸಮರ್ಥಿಸಲು ಕೇಳಿ. ಪ್ರತಿ ವಿದ್ಯಾರ್ಥಿಯು ತಮ್ಮ ಸ್ಥಾನದ ಬಗ್ಗೆ ವಿವರಿಸಿದಾಗ ನಿರೂಪಕರು ವಿದ್ಯಾರ್ಥಿಗಳಲ್ಲಿ ಚರ್ಚೆಯನ್ನು ಪ್ರೋತ್ಸಾಹಿಸಬೇಕು. ಚರ್ಚೆಯ ನಂತರ ವಿದ್ಯಾರ್ಥಿಗಳು ಸ್ಥಾನಗಳನ್ನು ಬದಲಾಯಿಸಬಹುದು.
- ವಿವಿಧ ಗುಂಪಿನ ವಿದ್ಯಾರ್ಥಿಗಳೊಂದಿಗೆ ವಿವಿಧ ಹೇಳಿಕೆಗಳನ್ನು ಬಳಸಿ ಇದೇ ಚಟುವಟಿಕೆಯನ್ನು ಪುನರಾವರ್ತಿಸಬೇಕು.
- ಮಕ್ಕಳು ಅದರಲ್ಲೂ ವಿಶೇಷವಾಗಿ ಹುಡುಗಿಯರಲ್ಲಿ ಬೇರೂರಿರುವ ಕೆಲವು ನಂಬಿಕೆಗಳು ಎಲ್ಲಿಂದ ಬರುತ್ತವೆ? ಅದರ ಪರಿಣಾಮಗಳೇನು? ಇಂತಹ ವಿಷಯಗಳ ಬಗ್ಗೆ ಯೋಚಿಸಲು ಪ್ರೋತ್ಸಾಹಿಸುವ ಮೂಲಕ ನಿರೂಪಕರು/ನಾಯಕರು ಚರ್ಚೆಯನ್ನು ಸಂಕ್ಷಿಪ್ತಗೊಳಿಸಬೇಕು.

**ಈಗ ಪ್ರತಿಜ್ಞೆಯನ್ನು ಮಾಡುವ ಸಮಯ :**

## ಪ್ರತಿಜ್ಞೆ



ಉತ್ತಮ ಸಮಾಜವನ್ನು ಸೃಷ್ಟಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಮನೆ, ಶಾಲೆ ಮತ್ತು ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ನಿವಾರಿಸಬೇಕಾಗಿದೆ. ಹೆಚ್ಚಿನ ಸಮಾನತೆಯುಳ್ಳ ಸಮಾಜವನ್ನು ನಿರ್ಮಿಸುವತ್ತ ಪ್ರತಿಜ್ಞೆ ಮಾಡೋಣ.

1. ಪ್ರಜ್ಞಾವಂತ ಪ್ರಜೆಯಾಗಿ, ಮನೆ, ಶಾಲೆ ಮತ್ತು ಸಮಾಜದಲ್ಲಿ ಮಹಿಳೆಯರಿಗೆ ಆಗುತ್ತಿರುವ ಅಸಮಾನತೆಯ ಧೋರಣೆಯನ್ನು ಅರ್ಥಮಾಡಿಕೊಂಡಿದ್ದೇನೆ ಮತ್ತು ಈ ಅಸಮಾನತೆಯ ವಿರುದ್ಧ ಹೋರಾಡಿ ಆರೋಗ್ಯಕರ ಮತ್ತು ಬಲಿಷ್ಠ ಸಮಾಜವನ್ನು ನಿರ್ಮಿಸುವ ಭರವಸೆ ನೀಡುತ್ತೇನೆ.
2. ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ನಾನು ಕೆಲಸ ಮಾಡುತ್ತೇನೆ.
3. ಲಿಂಗ ತಾರತಮ್ಯವಿಲ್ಲದ, ಸಮಾನತೆ ಒಗ್ಗೂಡಿಸಿಕೊಂಡ ಜೀವನವನ್ನು ನಡೆಸೋಣ.
4. ಪುರುಷ ಮೇಲು ಮತ್ತು ಸ್ತ್ರೀ ಕೀಳು ಅಥವಾ ಪುರುಷ ಶ್ರೇಷ್ಠ ಮತ್ತು ಸ್ತ್ರೀ ಕನಿಷ್ಠ ಎಂಬ ಭಾವನೆಯನ್ನು ತೊಡೆದುಹಾಕೋಣ.
5. ಮನೆ ಮತ್ತು ಶಾಲೆಯಲ್ಲಿ ಯಾವುದೇ ಲಿಂಗತ್ವ ಅಸಮಾನತೆ ಇಲ್ಲದಿರುವಂತೆ ನೋಡಿಕೊಳ್ಳೋಣ.
6. ಈ ರಾಷ್ಟ್ರದ ಪ್ರಜ್ಞೆಯುಳ್ಳ ಪ್ರಜೆಯಾಗಿ, ನನ್ನ ಕರ್ತವ್ಯಗಳನ್ನು ಪೂರೈಸಲು ಭಾರತ ಮಾತೆಯ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ.

**ಸಲಹಾತ್ಮಕ ಚಟುವಟಿಕೆಗಳು :**

ಲಿಂಗತ್ವ ಸಮಾನತೆಗೆ ಸಂಬಂಧಿಸಿದಂತೆ ಮಕ್ಕಳಿಗೆ ಅರಿವು ಮೂಡಿಸಲು ಶಾಲಾ ಪಠ್ಯಕ್ರಮದಲ್ಲಿ ಅನೇಕ ಪಾಠಗಳನ್ನು ಅಳವಡಿಸಿದೆ. ಈ ಚಟುವಟಿಕೆಗೆ ಪೂರಕವಾಗಿ ಯೋಜನಾ ಕಾರ್ಯಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು.

ಕೆಲವು ಉದಾಹರಣೆಗಳನ್ನು ನೀಡಿದೆ.

1. ನಿಮ್ಮ ಗ್ರಾಮ ಪಂಚಾಯಿತಿ/ಸ್ಥಳೀಯ ಸಂಸ್ಥೆಗಳಲ್ಲಿ ಆಯ್ಕೆಯಾದ ಮಹಿಳಾ ಮತ್ತು ಪುರುಷ ಜನಪ್ರತಿನಿಧಿಗಳ ಪಟ್ಟಿಯನ್ನು ಸಿದ್ಧಪಡಿಸಿ ಹೋಲಿಕೆ ಮಾಡಿ.
2. ಅಸಮಾನತೆಯನ್ನು ಹೋಗಲಾಡಿಸಲು ಹೆಣ್ಣು ಮಕ್ಕಳಿಗೆ ಇರುವ ಅವಕಾಶಗಳನ್ನು ಪಟ್ಟಿ ಮಾಡಿ.
3. ನಿಮಗೆ ತಿಳಿದಿರುವ ಮಹಿಳಾ ಸಾಧಕಿಯರ ಯಶೋಗಾಥೆಗಳನ್ನು ಸಂಗ್ರಹಿಸಿ.
4. ನಿಮ್ಮ ಲೈಬ್ರರಿಯಲ್ಲಿರುವ ಪುಸ್ತಕದಲ್ಲಿ ಮಹಾನ್ ವ್ಯಕ್ತಿಗಳ ಸಾಧನೆಗಳನ್ನು ಓದಿ.